7	ಹೊಳೆನರಸೀಪುರ	264	264	0	264	0
	ನಕಲೇಶಪುರ	184	184	0	184	0
ಒಟ್ಟು		**2514**	**2514**	**0**	**2514**	**0**

ಎಸ್ ಎಸ್ ಎ ಯೋಜನೆಯಡಿಯಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ಸೌಕರ್ಯಗಳನ್ನು ಈ ಮೇಲಿನ ಎಲ್ಲಾ ಶಾಲೆಗಳಿಗೂ ಒದಗಿಸಲಾಗಿದೆ.

ಆ) ಎಸ್.ಎಸ್.ಎ ಯೋಜನೆಯಡಿಯಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೂ ಮೂಲಭೂತ ಸೌಲಭ್ಯಗಳನ್ನು ಈಗಾಗಲೇ ಹಂತ ಹಂತವಾಗಿ ಎಲ್ಲಾ ಶಾಲೆಗಳಿಗೂ ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳು ಅದನ್ನು ಬಳಸಿಕೊಳ್ಳುತ್ತಿದ್ದಾರೆ.

ಇ) ಎಸ್.ಎಸ್.ಎ ಯೋಜನೆಯಡಿಯಲ್ಲಿ ಕಾಲಮಿತಿ ಯೋಜನೆಯ ಒಳಗೆ ಹಂತ ಹಂತವಾಗಿ 2009–10, 2010–11, 2011–12 ಮತ್ತು 2012–13ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಅನುಷ್ಠಾನಗೊಳಿಸಲಾಗಿದೆ.

ಹಾಸನದಲ್ಲಿ ವಿಮಾನ ನಿಲ್ದಾಣ ನಿರ್ಮಾಣ

369(609); ಶ್ರೀ ಪ್ರಕಾಶ್ ಹೆಚ್ ಎಸ್. (ಹಾಸನ)

ಅ) ಹಾಸನ ನಗರದಲ್ಲಿ ವಿಮಾನ ನಿಲ್ದಾಣಕ್ಕಾಗಿ ಕೇಂದ್ರ ಸರ್ಕಾರ ಅನುಮೋದನೆ ನೀಡಿ, ಭೂ ಸ್ವಾಧೀನ ಪ್ರಕ್ರಿಯೆಯು ಮುಗಿದಿದ್ದರೂ ಇದುವರೆವಿಗೂ ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣಗಳೇನು (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಎಸ್.ಆರ್. ಪಾಟೀಲ್ (ಯೋಜನೆ ಮತ್ತು ಸಾಂಖ್ಯಿಕ ಹಾಗೂ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಹಾಸನ ನಗರದಲ್ಲಿ ಸರ್ಕಾರವು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಲು ತೀರ್ಮಾನಿಸಿದ್ದು, ಈ ವಿಮಾನ ನಿಲ್ದಾಣ ಅಭಿವೃದ್ಧಿದಾರರು ಮೆ. ಜುಪಿಟರ್ ಏವಿಯೇಷನ್ ಸರ್ವಿಸಸ್ ಲಿಮಿಟೆಡ್ ಇವರಿಗೆ ಹಿಂದೆ ನಿಗದಿಪಡಿಸಿದ 900 ಏಕರೆ ಜಮೀನಿಗೆ ಬದಲಾಗಿ 761 ಏಕರೆ ಜಮೀನನ್ನು ನಿಗದಿಪಡಿಸಿದ್ದು ಇದರಲ್ಲಿ 536 ಏಕರೆ ಜಮೀನನ್ನು ಈಗಾಗಲೇ ಭೂಸ್ವಾದೀನಪಡಿಸಿಕೊಂಡು ಅಭಿವೃದ್ಧಿದಾರರಿಗೆ ಹಸ್ತಾಂತರಿಸಿದೆ, ಅಭಿವೃದ್ಧಿದಾರರಿಂದ ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ನಿರೀಕ್ಷಿಸಿದೆ.

ಅನಿರ್ಬಂಧಿತ ಅನುದಾನ ಯೋಜನೆ

304(569); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಲ್ಲಿ ಅನಿರ್ಬಂಧಿತ ಅನುದಾನ ಯೋಜನೆಯಡಿ ಕಾಮಗಾರಿ ನಿರ್ವಹಿಸಲು ಅನುದಾನ ಮಂಜೂರು ಮಾಡುವ ಯೋಜನೆ ಚಾಲ್ತಿಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಇದರ ಉದ್ದೇಶವೇನು; ಅನಿರ್ಬಂಧಿತ ಅನುದಾನದ ಬಳಕೆಗೆ ನಿರ್ಬಂಧ ಹೇರಿ ಸರ್ಕಾರವು ಇತ್ತೀಚೆಗೆ ಸುತ್ತೋಲೆಯನ್ನು ಹೊರಡಿಸಿದೆಯೇ; ಇದಕ್ಕೆ ಕಾರಣಗಳೇನು;

ಇ) ಸದರಿ ಅನುದಾನವನ್ನು ಯಾವ ಯಾವ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಬಳಸಬಹುದಾಗಿರುತ್ತದೆ;

ಈ) ನಿಟ್ಟಿನಲ್ಲಿ ಪ್ರತಿ ತಾಲ್ಲೂಕು ಪಂಚಾಯತಿಗೆ ತಲಾ ಎಷ್ಟು ಅನುದಾನವನ್ನು ನೀಡಬಹುದಾಗಿರುತ್ತದೆ;

ಉ) ತಾಲ್ಲೂಕು ಪಂಚಾಯತಿ ಸದಸ್ಯರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ತಮ್ಮ ವಿವೇಚನೆ ಮೇರೆಗೆ ಕೆಲಸ ಕೈಗೊಳ್ಳಬಹುದೇ; ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಮುಂದಾಗಲು ಕಾರಣಗಳೇನು?